**ಅಧ್ಯಕ್ಷರು** : ಆಯಿತು. O.K.

**ಪ್ರಶ್ನೆ ಸಂಖ್ಯೆ : 37(609)**
**ಶ್ರೀ ಮುನಿರತ್ನ (ರಾಜರಾಜೇಶ್ವರಿ ನಗರ)**
**ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು.**

**ಅಧ್ಯಕ್ಷರು** : ರವಿ ಸುಬ್ರಮಣ್ಯ ನಿಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ರವಿ ಸುಬ್ರಮಣ್ಯ** : ಮಾನ್ಯ ಅಧ್ಯಕ್ಷರೆ, ನಾನು ಯಾವಾಗ ಪ್ರಶ್ನೆಯನ್ನು ಕೇಳಿದರೂ ಕಾಲಾವಕಾಶವನ್ನು ಕೇಳುವುದೇ ಆಗುತ್ತಿದೆ. ಬೆಳಗಾವಿ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೆ ಇದುವರೆಗೆ ಯಾವುದೇ ಉತ್ತರ ಬಂದಿಲ್ಲ. ಮೊನ್ನೆ ಪ್ರಶ್ನೆ ಕೇಳಿದ್ದಕ್ಕೆ 15 ದಿವಸಗಳ ಕಾಲಾವಕಾಶ ಕೇಳಿದ್ದಾರೆ. ಪ್ರಶ್ನೆಗಳು star ಆಗುವುದೇ ಕಷ್ಟ, ಸಾವಿರಾರು ಕೋಟಿ ರೂಪಾಯಿಗಳು ಬೆಂಗಳೂರು ಮಹಾನಗರ ಪಾಲಿಕೆಯ, ಬಿಡಿಎ ಆಸ್ತಿಗಳು ಸರಿಯಾಗಿ ಉಪಯೋಗ ವಾಗುತ್ತಿಲ್ಲ.

**ಅಧ್ಯಕ್ಷರು** : ಆಯಿತು, ಈ ಸಾರಿ ಸಮಯ ಕಡಿಮೆ ಇರುವುದರಿಂದ ಈ ರೀತಿ ತೊಂದರೆ ಆಗಿ ಬಿಟ್ಟಿದೆ. ಇದಾದ ಮೇಲೆ ನೋಡಿಕೊಳ್ಳೋಣ. ನಿಮಗೆ ಉತ್ತರವನ್ನು ಕಳುಹಿಸಿ ಕೊಡುವ ಪ್ರಯತ್ನವನ್ನು ಖಂಡಿತ ಮಾಡುತ್ತೇವೆ.

**ಶ್ರೀ ರವಿ ಸುಬ್ರಮಣ್ಯ** : ಬೆಳಗಾವಿ ಅಧಿವೇಶನದಲ್ಲಿ ನಮಗೆ ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡುತ್ತೇವೆಂದು ಹೇಳಿದ್ದಿರಿ, ನಮಗೆ ಇಲ್ಲಿ ಅವಕಾಶಗಳೂ ಸಹ ಸಿಗುತ್ತಿಲ್ಲ. ಬೆಂಗಳೂರಿನಲ್ಲಿ 23 ಅಸೆಂಬ್ಲಿ ಕ್ಷೇತ್ರಗಳಿವೆ. ಸುಮಾರು 15% ಜನ ಎಂ.ಎಲ್.ಎ.ಗಳು ಬೆಂಗಳೂರಿನಿಂದ ಆರಿಸಿ ಬರುತ್ತೇವೆ. ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ನಮಗೆ ಯಾವುದೇ ರೀತಿ ಅವಕಾಶ ಸಿಗುತ್ತಿಲ್ಲ. ದಯಮಾಡಿ ನಮಗೆ ಅವಕಾಶ ಕೊಡಿ.

**ಅಧ್ಯಕ್ಷರು** : ಮಾನ್ಯ ಮುಖ್ಯಮಂತ್ರಿಗಳೇ ಇವರ ಪ್ರಶ್ನೆಗಳಿಗೆ ಆಮೇಲೆ ಉತ್ತರವನ್ನು ಒದಗಿಸಿಕೊಡಿ.

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)** : ಆಯಿತು.

**ಅಧ್ಯಕ್ಷರು** : ನಾರಾಯಣ ಗೌಡರು, ಪ್ರಶ್ನೆ ಕೇಳಿ

**ಕೈಗಾರಿಕಾ ಕೇಂದ್ರ ಸ್ಥಾಪಿಸುವುದು**

**40(656) ಶ್ರೀ ನಾರಾಯಣಗೌಡ (ಕೆ.ಆರ್.ಪೇಟೆ)**

ಅ) ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕೈಗಾರಿಕಾ ನೀತಿಯನ್ನು ರೂಪಿಸಿದೆಯೇ;

ಆ) ಈ ತಾಲ್ಲೂಕಿನಲ್ಲಿ ಯಾವ ಪ್ರದೇಶವನ್ನು ಕೈಗಾರಿಕಾ ಯೋಗ್ಯ ಪ್ರದೇಶವೆಂದು ಗುರುತಿಸಲಾಗಿದೆ;

ಇ) ಇದುವರೆವಿಗೆ ಎಷ್ಟು ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕಾ ಪ್ರದೇಶವೆಂದು ಗುರುತಿಸಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಈ) ಈ ಭೂಸ್ವಾಧೀನದ ಜಮೀನಿನಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಯೋಜಿಸಿದೆ?

**ಶ್ರೀ ಸಿದ್ದರಾಮಯ್ಯ (ಮನ್ಯ ಮುಖ್ಯ ಮಂತ್ರಿಗಳು)**

ಅ) ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹನೆ ನೀಡಲು ಕೈಗಾರಿಕಾ ನೀತಿ 2009–14 ರ ನೀತಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.